ಉ) ಸರಕಾರಿ ಸ್ವಾಮ್ಯಕ್ಕೆ ಕೈಗಾರಿಕೆಗಳನ್ನು ಬೀದರ್‌ನಲ್ಲಿ ಸ್ಥಾಪಿಸುವ ಯೋಜನೆ ಏನಾದರೂ ರೂಪಿಸಲಾಗಿದೆಯೇ (ರೂಪಿಸಿದ್ದರೆ ವಿವರ ನೀಡುವುದು) ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ ಸಚಿವರು).—

ಅ) ಕೇಂದ್ರ ಸರ್ಕಾರದವರು ಬೀದರ್ ಜಿಲ್ಲೆಯನ್ನು ದಿನಾಂಕ ೧–೪–೧೯೮೩ ರಿಂದ ಸೆಪ್ಟೆಂಬರ್ ೧೯೮೮ರ ಅಂತ್ಯದವರೆಗೆ ಅನ್ವಯಿಸುವಂತೆ ಕೈಗಾರಿಕಾ ರಹಿತ ಜಿಲ್ಲೆ ಎಂದು ಘೋಷಿಸಿರುತ್ತಾರೆ. ದಿನಾಂಕ ೧–೧೦–೧೯೮೮ರ ನಂತರ ರಾಜ್ಯ ಸರ್ಕಾರವು ವಿಶೇಷ ಸಮಗ್ರ ಪ್ರೋತ್ಸಾಹಧನವನ್ನು ಒದಗಿಸಿದೆ.

ಆ) ರೂ. ೭೦೬.೦೮ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಇ) ಜಿಲ್ಲೆಯ ಸ್ಥಳೀಯ ರೂ. ೧,೬೦೧ ಸಣ್ಣ ಕೈಗಾರಿಕಾಗಳನ್ನು ಹಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಇದುವರೆವಿಗೆ ಸ್ಥಾಪಿಸಿರುತ್ತಾರೆ.

ಈ) ಸ್ಥಳೀಯ ಜನರಿಗೆ ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ರೂ.೯೩೧.೧೪ ಲಕ್ಷಗಳನ್ನು ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗಾಗಿ ರೂ. ೧೨೭.೪೩ ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗಿದೆ.

ಉ) ಯಾವುದೂ ಇಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ :—ಲಿಖಿತ ಮೂಲಕ ಉತ್ತರಿಸುವ ೨೦ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಶ್ವಬ್ಯಾಂಕಿನಿಂದ ಕರ್ನಾಟಕಕ್ಕೆ ರೇಷ್ಮೆ ಇಲಾಖೆಗೆ ಕೊಟ್ಟಿರುವ ಆರ್ಥಿಕ ನೆರವು.

೯೪೮. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕಳೆದ ಮೂರು ವರ್ಷಗಳಿಂದ ವಿಶ್ವ ಬ್ಯಾಂಕಿನ ನೆರವು ಯೋಜನೆ ಮೇರೆಗೆ ರಾಜ್ಯದ ರೇಷ್ಮೆ ಇಲಾಖೆಗೆ ನೀಡಿರುವ ಹಣವೆಷ್ಟು;

ಆ) ವಿಶ್ವಬ್ಯಾಂಕಿನ ನೆರವಿನಿಂದ ತುಮಕೂರು ಜಿಲ್ಲೆಯಲ್ಲಿ ಕಟ್ಟಡಕ್ಕೆ ರೇಷ್ಮೆ ಸಾಕಾಣಿಕೆ ಅಭಿವೃದ್ಧಿಗೆ ಹಾಗೂ ಇತರೆ ಎಲ್ಲಾ ಬಾಬುಗಳಿಗೆ ಖರ್ಚು ಮಾಡಿರುವ ಹಣವೆಷ್ಟು (ಕಟ್ಟಡಗಳನ್ನು ಕಟ್ಟಿರುವ ಅಂದಾಜು ವಿವರಣೆ ಸಮೇತ ಕಳಿಸುವುದು) ;

(ಇ) ಕಳಪೆ ಮಟ್ಟದ ಕಟ್ಟಡಗಳನ್ನು ರೇಷ್ಮೆ ಚಾಕಿ ಸೆಂಟರ್ ಕಟ್ಟಡಗಳನ್ನು ಹಾಗೂ ಇತರೆ ಕಟ್ಟಡಗಳನ್ನು ಕಟ್ಟುವ ಕಂಟ್ರಾಕ್ಟರ್‌ಗಳು ಹಣ ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ)

ಇಸವಿ	ರೂ ಲಕ್ಷಗಳಲ್ಲಿ
೧೯೮೭–೮೮	೭೨೦
೧೯೮೮–೮೯	೩೭೫
೧೯೮೯–೯೦	೧೦೫೦
ಒಟ್ಟು	೨೧೪೫

ಆ) ೧೯೧.೭೭ ಲಕ್ಷ ರೂಪಾಯಿಗಳು ಕಟ್ಟಡಗಳನ್ನು ಕಟ್ಟಿರುವ ಅಂದಾಜು ವಿವರಣೆ ಲಗತ್ತಿಸಲಾಗಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.